**ಸಾಕ್ಷಿಯನ್ನು ದಿನಾಂಕ 05-04-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಜಿ. ಜಿ. ಭಟ್ಟರಿಂದಃ**

ನಾನು ಕರ್ಕಿಕೋಡಿಯ ಮನೆಯಲ್ಲಿ ಜನಿಸಿರುತ್ತೇನೆ. ನಾನು ಸುಮಾರು 5-6 ವರ್ಷದ ಚಿಕ್ಕ ಹುಡುಗನಿದ್ದಾಗ ನಮ್ಮ ತಂದೆಯವರು ಕರ್ಕಿಕೋಡಿಯಿಂದ ಅರೇಅಂಗಡಿಗೆ ಬಂದಿರುತ್ತಾರೆ. ಅರೇಅಂಗಡಿಗೆ ನಮ್ಮ ತಂದೆ ಬಂದ ನಂತರ ವಾಸಕ್ಕಾಗಿ ಸ್ವತಂತ್ರಕ್ಕಾಗಿ ಮನೆಯನ್ನು ಮಾಡಿಕೊಂಡಿರುತ್ತಾರೆ. ಅದೇ ಕಾಲಕ್ಕೆ ನಮ್ಮ ತಂದೆಯವರು ಅರೇಅಂಗಡಿಯಲ್ಲಿ ಕೃಷಿ ಜಮೀನನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ಅರೇಅಂಗಡಿಯಲ್ಲಿ ನಮ್ಮ ತಂದೆಯವರಿಗೆ ಸರಕಾರದಿಂದ ಮಂಜೂರಾಗುವ ಮೊದಲು ಯಾವುದೇ ಜಮೀನು ಇರಲಿಲ್ಲ. ತದನಂತರದಲ್ಲಿ ನಮ್ಮ ತಂದೆಯವರು ಅತಿಕ್ರಮಣ ಮಾಡಿದ್ದು ಅದನ್ನು ಸರಕಾರದವರು ಮಂಜೂರು ಮಾಡಿದ್ದಾರೆ. ಅತಿಕ್ರಮಣ ಮಾಡಿರುವುದಾಗಿ ಮಂಜೂರಾತಿಗಾಗಿ ಅರ್ಜಿಯನ್ನು ನಮ್ಮ ತಂದೆಯವರು ಸಲ್ಲಿಸಿರುತ್ತಾರೆ ಎಂದರೆ ಸರಿ. ಯಾವ ಇಸವಿಯಲ್ಲಿ ಸದರಿ ಅರ್ಜಿ ಸಲ್ಲಿಸಿದ್ದರು ಮತ್ತು ಯಾವಾಗ ಮಂಜೂರಾಗಿದೆ ಎಂಬುದು ನನಗೆ ಗೊತ್ತಿಲ್ಲ. ಯಾವ ಸರ್ವೆ ನಂಬರಿನಲ್ಲಿ ಎಷ್ಟು ಕ್ಷೇತ್ರ ಮಂಜೂರಾಗಿದೆ ಎನ್ನುವುದೂ ಸಹ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಮೃತಪಡುವ ಕಾಲಕ್ಕೆ ಅವರ ಹೆಸರಿನಲ್ಲಿ ನಿಖರವಾಗಿ ಎಷ್ಟು ಜಮೀನು ಇತ್ತು ಎಂಬ ಬಗ್ಗೆಯೂ ಸಹ ನನಗೆ ಮಾಹಿತಿ ಇಲ್ಲ. ನಮ್ಮ ತಂದೆ ಮೃತಪಡುವ ದಿನಕ್ಕೆ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಅದು ಸರಿ. ನಮ್ಮ ತಂದೆಯವರು ಜೀವಿತ ಕಾಲಕ್ಕೆ ಏನೆಲ್ಲ ಆಸ್ತಿ ಮಾಡಿದ್ದಾರೆ ಎಂಬ ಬಗ್ಗೆ ತಿಳಿದುಕೊಳ್ಳಲು ನಾನು ಯಾವುದೇ ಮಾಹಿತಿಯನ್ನು ತೆಗೆದುಕೊಂಡಿಲ್ಲ. ನಮ್ಮ ತಂದೆಯವರ ಜೀವಿತ ಕಾಲದಲ್ಲಿ ಒಂದು ಮನೆಯನ್ನು ಕಟ್ಟಿಸಿದ್ದರು. ನಾನು ನೌಕರಿಗೆ ಸೇರುವವರೆಗೂ ನಮ್ಮ ತಂದೆಯ ಜೊತೆಯಲ್ಲಿ ಅರೇಅಂಗಡಿಯ ಮನೆಯಲ್ಲೇ ವಾಸವಾಗಿದ್ದೆ. ನಾನು 2003 ರಲ್ಲಿ ಪ್ರತ್ಯೇಕವಾಗಿ ಮನೆ ಮಾಡಿಕೊಂಡಿದ್ದೆನು. 2003 ರವರೆಗೆ ನಾನು ಅರೆಅಂಗಡಿಯ ಮನೆಯಲ್ಲಿಯೇ ವಾಸವಾಗಿದ್ದೆ ಎಂದರೆ ಅದು ಸರಿಯಲ್ಲ. ನಾನು ನೌಕರಿ ಮಾಡುವ ಕಾಲಕ್ಕೆ ಬಾಡಿಗೆ ಮನೆಯಲ್ಲಿ ವಾಸ ಮಾಡಿದ್ದೆ ಎನ್ನುತ್ತಾರೆ. ಬಾಡಿಗೆ ಮನೆಯಲ್ಲಿದ್ದರೂ ಹಬ್ಬ ಹರಿದಿನಗಳಲ್ಲಿ ಕುಟುಂಬ ಸಮೇತ ಅರೆಅಂಗಡಿಯ ಮನೆಗೆ ಬಂದು ಹೋಗುತ್ತಿದ್ದೆ ಎಂದರೆ 2000 ನೇ ಇಸವಿಯವರೆಗೆ ಬಂದು ಹೋಗುತ್ತಿದ್ದೆ, ನಂತರ ಬರಲಿಲ್ಲ. 2000 ದ ನಂತರವೂ ಸಹ ಅರೆಅಂಗಡಿ ಮನೆಗೆ ಬಂದು ಹೋಗಲು ಏನಾದರೂ ತೊಂದರೆ ಇತ್ತಾ ಎಂದರೆ ನಮ್ಮ ತಂದೆಯವರು ನೌಕರಿ ಬಿಡುವಂತೆ ನನಗೆ ಒತ್ತಾಯಿಸಿದ್ದು ನಾನು ಒಪ್ಪದೇ ಇದ್ದಾಗ ನನಗೂ ಅವರಿಗೂ ಹೊಂದಾಣಿಕೆ ಬರಲಿಲ್ಲ, ಆ ಕಾರಣಕ್ಕೆ 2000 ದಿಂದ ನಾನು ಅರೆಅಂಗಡಿ ಮನೆಗೆ ಹೋಗುವುದು ಬರುವುದನ್ನು ನಿಲ್ಲಿಸಿದ್ದೆ.

ನಮ್ಮ ಮನೆಯಲ್ಲಿ ಎಣ್ಣೆ ಮಿಲ್ ಇತ್ತು. ಸದರಿ ಮಿಲ್ಲನ್ನು ನಾನೇ 1980 ರ ವರೆಗೆ ನಡೆಸಿರುತ್ತೇನೆ. ಅದರ ಉತ್ಪನ್ನವನ್ನು ನೀವೇ ತೆಗೆದುಕೊಳ್ಳುತ್ತಿದ್ದಿರಿ ಎಂದರೆ ನಮ್ಮ ತಂದೆಯು ಮನೆಯ ಯಜಮಾನರಾಗಿದ್ದು ನಾನು ಕೆಲಸ ಮಾತ್ರ ಮಾಡುತ್ತಿದ್ದೆ, ಯಾವುದೇ ಉತ್ಪನ್ನ ತೆಗೆದುಕೊಳ್ಳುತ್ತಿರಲಿಲ್ಲ

ಎನ್ನುತ್ತಾರೆ. ತಂದೆಯವರ ಜೊತೆ ಕುಟುಂಬದಲ್ಲಿ ಸಹಜವಾಗಿ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೆವು.ನಮ್ಮ ತಂದೆಯವರು ಏನೆಲ್ಲ ಆಸ್ತಿಗಳನ್ನು ಮಾಡಿದ್ದಾರೆ ಎಂದು ಸಹಜವಾಗಿ ನೀವು ಕೇಳಿದ್ದೀರಾ ಎಂದರೆ ನಾನು ಕೇಳಲಿಲ್ಲ ಎನ್ನುತ್ತಾರೆ. ನಮ್ಮ ತಂದೆಯವರು ಏನೆಲ್ಲ ಆಸ್ತಿಗಳನ್ನು ಮಾಡಿದ್ದಾರೆ ಎಂದು ತಿಳಿದುಕೊಳ್ಳಲು ನನಗೆ ಏನೂ ತೊಂದರೆ ಇರಲಿಲ್ಲ ಆದರೆ ಅದರ ಅವಶ್ಯಕತೆ ಇರಲಿಲ್ಲ. ನಾನು ಕುಟುಂಬದ ಹಿರಿಯ ಮಗ ಎಂದರೆ ಸರಿ. ದಾವೆ ಸಲ್ಲಿಸುವ ಕಾಲಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ.

ನನ್ನ ವಾದಪತ್ರದಲ್ಲಿ ನಾನು ತಂದೆಯೊಟ್ಟಿಗೆ ಕೃಷಿ ಕೆಲಸ ಮಾಡುತ್ತಿದ್ದೆ ಎಂದು ಹೇಳಿದ್ದೇನೆ. ಯಾವ ಸರ್ವೆ ನಂಬರಿನ ಎಷ್ಟು ವಿಸ್ತೀರ್ಣ ಸ್ವತ್ತಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದಿರಿ ಎಂದರೆ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. ಆದರೆ ಇದ್ದ ಭೂಮಿಗೆ ಸುತ್ತಲೂ ಬೇಲಿ ಹಾಕಿದ್ದು, ಗೇರು ಬೀಜ ಮತ್ತು ನುಗ್ಗೆ ಗಿಡಗಳು ಇದ್ದು ಸದರಿ ಭೂಮಿಯಲ್ಲಿ ನಾನು ಕೃಷಿ ಕೆಲಸ ಮಾಡುತ್ತಿದ್ದೆ ಎನ್ನುತ್ತಾರೆ. 1980 ರ ವರೆಗೆ ನಾನು ಕೃಷಿ ಕೆಲಸ ಮಾಡಿರುತ್ತೇನೆ. ನಮ್ಮ ತಂದೆಯವರು ಜೀವಿತ ಕಾಲದಲ್ಲಿಯೇ ಅವರು ಮಾಡಿದ್ದ ಎಲ್ಲಾ ಜಮೀನುಗಳನ್ನು ವಿಲೇವಾರಿ ಮಾಡಿದ್ದಾರೆ ಎಂದರೆ ಸರಿ. ವಿಲೇವಾರಿ ತಡೆಯುವ ನಿಟ್ಟಿನಲ್ಲಿ ನೀವೇನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂದರೆ ಸರಿ ವಿಲೇವಾರಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ ಎನ್ನುತ್ತಾರೆ. ನಮ್ಮ ತಂದೆಯವರು ಮೃತಪಟ್ಟ ನಂತರವೇ ಎಲ್ಲಾ ಸ್ವತ್ತುಗಳು ವಿಲೇವಾರಿಯಾಗಿವೆ ಎಂದು ನನಗೆ ಗೊತ್ತಾಗಿರುತ್ತದೆ. ನಮ್ಮ ತಂದೆ ಮೃತಪಡುವ ಕಾಲಕ್ಕೆ ನಮ್ಮ ತಾಯಿ ಜೀವಂತವಾಗಿದ್ದರು. ನಮ್ಮ ತಾಯಿಯವರೂ ಸಹ ಸಾಕಷ್ಟು ಜಮೀನುಗಳನ್ನು ಅತಿಕ್ರಮಣ ಮಾಡಿದ್ದು ಅವರ ಹೆಸರಿಗೂ ಸಹ ಮಂಜೂರಾಗಿರುತ್ತದೆ. ನಮ್ಮ ತಾಯಿಗೆ ಮಂಜೂರಾಗಿರುವ ಸ್ವತ್ತುಗಳನ್ನೂ ಸಹ ಅವರು ಮಾರಾಟ ಮಾಡಿದ್ದಾರೆ ಎಂದರೆ ಸರಿ.

ದಾವಾ 'ಅ' ಷೆಡ್ಯೂಲ್ 1 ಮತ್ತು 2 ನೇ ಆಸ್ತಿಗಳನ್ನು ನಮ್ಮ ತಂದೆಯವರು ಜೀವಿತ ಕಾಲಕ್ಕೆ ದಾನಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ದಾನಪತ್ರಕ್ಕೆ ನಾನು ಏನೂ ತಕರಾರು ಮಾಡಿಲ್ಲ ಏಕೆಂದರೆ ಆ ಬಗ್ಗೆ ನನಗೆ ಏನೂ ಮಾಹಿತಿ ಇರಲಿಲ್ಲ. ದಾನಪತ್ರ ನೊಂದಾಯಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ದಾನಪತ್ರ ನೊಂದಾಯಿಸಲಾಗಿದೆಯೋ ಇಲ್ಲವೋ ನಾನು ಪರಿಶೀಲಿಸಿಲ್ಲ.

4 ನೇ ಪ್ರತಿವಾದಿ ಧೀರಜ ಅಪ್ರಾಪ್ತ ವಯಸ್ಕನಿದ್ದಾಗ ನಮ್ಮ ತಂದೆಯವರು ಕೆಲವು ಸ್ವತ್ತುಗಳನ್ನು ಆತನಿಗೆ ತಾನೇ ಅಪ್ರಾಯಸ್ಥ ಸಂರಕ್ಷಕನಾಗಿ ದಾನವಾಗಿ ನೀಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತುಗಳನ್ನು ನಮ್ಮ ತಂದೆಯವರೇ ಅಪ್ರಾಯಸ್ಥ ಸಂರಕ್ಷಕನಾಗಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಆಸ್ತಿಯು 4 ನೇ ಪ್ರತಿವಾದಿಗೂ ಹೋಗಿರುವ ಕಾಲಕ್ಕೆ ಆತನನ್ನೂ ಈ ದಾವೆಯಲ್ಲಿ ಸೇರಿಸಿದ್ದೇನೆ. ದಾನಾಪತ್ರ ಆಗುವ ಕಾಲಕ್ಕೆ ಮತ್ತು ಮಾರಾಟ ಆಗುವ ಕಾಲಕ್ಕೆ 4 ನೇ ಪ್ರತಿವಾದಿಯು ಅಪ್ರಾಪ್ತವಯಸ್ಕನಾಗಿದ್ದು ಆತನಿಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಅನಾವಶ್ಯಕವಾಗಿ ಆತನನ್ನು ಪಕ್ಷಗಾರನನ್ನಾಗಿ ಮಾಡಿದ್ದೇನೆ ಎಂದರೆ ಅದು ಸರಿಯಲ್ಲ.

ಮಾರಾಟ ಮಾಡಿರುವ ಆಸ್ತಿಯನ್ನು ನಮ್ಮ ತಂದೆಯವರೇ ಸ್ವಾಧೀನ ಕೊಟ್ಟಿದ್ದು ಮಾರಾಟವಾಗಿರುವ ಯಾವುದೇ ಆಸ್ತಿಯಲ್ಲಿ ನಮ್ಮ ಕುಟುಂಬದ ಯಾರೊಬ್ಬರೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ.

3 ನೇ ಪ್ರತಿವಾದಿ ವೆಂಕಟೇಶ ಕಡೆಮನೆರವರಿಗೆ ದಾನವಾಗಿ ನೀಡಿರುವ ಸ್ವತ್ತು ಅವರ ಸ್ವಾಧೀನದಲ್ಲಿದೆ ಎಂದರೆ ಸರಿ. ನಮ್ಮ ತಂದೆಯವರು ಮಾರಾಟ ಮತ್ತು ದಾನ ಮಾಡಿರುವ ವಿಚಾರ ಗೊತ್ತಿದ್ದರೂ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಆ ವಿಚಾರವೇ ಗೊತ್ತಿರಲಿಲ್ಲ. ನಾನು ಪ್ರಭಾತನಗರದಲ್ಲಿರುವ ಮನೆ ಮತ್ತು ನಿವೇಶನವನ್ನು ಮಾಡುವ ಕಾಲಕ್ಕೆ ನಮ್ಮ ತಂದೆ ಜೀವಂತವಾಗಿದ್ದರು. ಸದರಿ ಮನೆ ಕಟ್ಟುವ ಕಾಲಕ್ಕೆ ನಾನು ನಮ್ಮ ತಂದೆಯವರಿಂದ ಆರ್ಥಿಕ ಸಹಾಯ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಬೇರೆಯವರ ಮಾತುಕೇಳಿ ಪ್ರತಿವಾದಿಯರ ಮೇಲೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಅದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಪ್ರಾಪ್ತಿಯಾಗುವುದಿಲ್ಲ ಎಂದರೆ ಅದು ಸರಿಯಲ್ಲ.

**<u>ಪಾಟೀಸವಾಲುಃ- 6 ನೇ ಪ್ರತಿವಾದಿ ಪರ ಶ್ರೀ ಎಂ. ಎಲ್. ನಾಯ್ಕರಿಂದಃ</u>**

ಕರ್ಕಿಕೋಡಿಯಿಂದ ಅರೇಅಂಗಡಿಗೆ ನಮ್ಮ ತಂದೆಯವರು ಹೋದಾಗ ಅವರ ಜೊತೆ ನಾನು ಮತ್ತು ನನ್ನ ತಾಯಿ ಮಾತ್ರವೇ ಹೋಗಿದ್ದೆವು ಎಂದರೆ ಇರಬಹುದು. ನನ್ನ ತಮ್ಮ ಮತ್ತು ತಂಗಿಯರು ಅರೇಅಂಗಡಿಯಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಮತ್ತು ತಾಯಿಯರು ಅತಿಕ್ರಮಣ ಮಾಡಿದ್ದ ಸ್ಥಳವು ಗೇರು ಮರ ಬೆಳೆಸುವ ಸ್ಥಳ ಎಂದರೆ ಸರಿ. ಗೇರುಮರ ಬೆಳೆಯಲು ನೀರು, ಗೊಬ್ಬರ, ಔಷಧಿ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಾನು ಡಿಪ್ಲೊಮಾವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 1977 ರಲ್ಲಿ ವಿದ್ಯಾಭ್ಯಾಸವನ್ನು ನಿಲ್ಲಿಸಿರುತ್ತೇನೆ. ನಾನು ಮಾಡಿರುವ ವಿದ್ಯಾಭ್ಯಾಸವು ಪ್ರತಿನಿತ್ಯ ಶಾಲೆಗೆ ಹೋಗಿ ಮಾಡಿರುವ ವಿದ್ಯಾಭ್ಯಾಸ ಎಂದರೆ ಸರಿ. ಬೆಳಿಗ್ಗೆ ಪ್ರಾರಂಭವಾದ ಶಾಲೆ ಸಂಜೆ 05-30 ರವರೆಗೂ ಇರುತ್ತಿತ್ತು ಎಂದರೆ ಸರಿ. ಗೇರು ಬೀಜ ವರ್ಷಕ್ಕೆ ಒಂದೇ ಬೆಳೆ ಎಂದರೆ ಸರಿ. ನಾನು ನಡೆಸುತ್ತಿದ್ದ ಮಿಲನಲ್ಲಿ ಅಕ್ಕಿ ಗಿರಣಿ ಮತ್ತು ಹಿಟ್ಟಿನ ಗಿರಣಿ ಇತ್ತು ಎಂದರೆ ಸರಿ. ಮೂರೂ ಗಿರಣಿಗಳನ್ನು ನಾನೇ ನಡೆಸುತ್ತಿದ್ದೆ ಎಂದರೆ ಸರಿ. ನಮ್ಮ ತಂದೆಯವರು ಮೊದಲು ಗಿರಣಿ ನಡೆಸುತ್ತಿದ್ದು ತದನಂತರ ನಾನು ಮುಂದುವರಿಸಿರುತ್ತೇನೆ ಎಂದರೆ ಸರಿಯಲ್ಲ. 1977 ರಲ್ಲಿ ನಮ್ಮ ಕಾಲದಲ್ಲಿಯೇ ಪ್ರಾರಂಭಿಸಿರುತ್ತೇವೆ ಎನ್ನುತ್ತಾರೆ. ನಮ್ಮ ತಂದೆಯವರು ಬಟ್ಟೆ ಹೊಲಿಯುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಂದೆ-ತಾಯಿಯರು ಕಷ್ಟಪಟ್ಟು ಮೇಲೆ ಬಂದವರು ಎಂದರೆ ಸರಿ.

ತಂದೆಯವರ ಮರಣಾನಂತರ ವಾರಸುದಾರರಿಗೆ ಆಸ್ತಿ ಸೇರುತ್ತದೆ ಮತ್ತು ಖಾತೆಯನ್ನು ಬದಲಾಯಿಸಲು ಅರ್ಜಿ ಕೊಡಬೇಕು ಎನ್ನುವ ಸಾಮಾನ್ಯ ವಿಚಾರ ನನಗೆ ಗೊತ್ತು. ಆದರೆ ನಮ್ಮ ತಂದೆಯ ಮರಣಾನಂತರ ಖಾತೆ ಬದಲಾವಣೆ ಮಾಡಲು ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ. ನಮ್ಮ ತಂದೆಯವರೇ ಎಲ್ಲಾ ಸ್ವತ್ತುಗಳನ್ನು ಪರಾಧೀನ ಮಾಡಿದ್ದರಿಂದಲೇ ನಾನು ಖಾತೆ ಬದಲಾಯಿಸಿಕೊಳ್ಳಲು

ಯಾವುದೇ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಪರಾಧೀನ ಮಾಡಿರುವ ಸ್ವತ್ತಿನಲ್ಲಿ ಕೊಂಡವರು ಮತ್ತು ದಾನ ಪಡೆದವರು ಸ್ವಾಧೀನದಲ್ಲಿದ್ದು ಅದನ್ನು ನಾನು ಈವರೆಗೆ ಪ್ರಶ್ನಿಸಿಲ್ಲ. ಖರೀದಿದಾರರು ಮತ್ತು ದಾನಕ್ಕೆ ಪಡೆದವರು ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದಾರೆ ಎನ್ನುವ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ.

ದಾವಾ ಅ ಪರಿಶಿಷ್ಟದ ಆಸ್ತಿಗಳು ತಂದೆ ಮತ್ತು ಅಣ್ಣತಮ್ಮಂದಿರ ನಡುವೆ ಈಗ ಜಂಟಿಯಾಗಿ ಉಳಿದಿಲ್ಲ, ವಾಂಟಣಿಯಾಗಿದೆ. ನಮ್ಮ ತಂದೆಯವರೇ ನಮ್ಮ ಅಜ್ಜನಿಗೆ ಹಿರಿಯ ಮಗ. ನಮ್ಮ ತಂದೆಯವರು ಅರೇಅಂಗಡಿಗೆ ಹೋದ ನಂತರ ಅ ಪರಿಶಿಷ್ಟದ ಆಸ್ತಿಗಳಲ್ಲಿ ಯಾವುದೇ ಉತ್ಪನ್ನ ತೆಗೆದುಕೊಂಡಿರುವುದಿಲ್ಲ ಎಂದರೆ ಅದು ಸರಿಯಲ್ಲ. ನನ್ನ ಅಜ್ಜ ಮತ್ತು ಅಜ್ಜನ ಮಕ್ಕಳು ಯಾವ ಯಾವ ಸ್ವತ್ತುಗಳಲ್ಲಿ ಯಾವ ಯಾವ ವರ್ಷ ವಾಂಟಣಿ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಸದರಿ ವಾಂಟಣಿಯು ನೊಂದಣಿಯೋ, ಇಲ್ಲವೋ ಅಥವಾ ಕೋರ್ಟ ಮೂಲಕವೋ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಹೆಸರನಲ್ಲಿದ್ದ ಆಸ್ತಿಗಳನ್ನು ನಮ್ಮ ಅಜ್ಜನವರೇ ವೈವಾಟು ಮಾಡುತ್ತಿದ್ದರು. ನಾನಾಗಲೀ, ನನ್ನ ತಮ್ಮ ತಂಗಿಯರಾಗಲೀ ಕರ್ಕಿ ಕೋಡಿಯ ಆಸ್ತಿಯನ್ನು ಉಳುಮೆ ಮಾಡಲು ಹೋಗಿಲ್ಲ. ಕರ್ಕಿಕೋಡಿಯ ಆಸ್ತಿಯ ಪೈಕಿ ಕೆಲವು ಆಸ್ತಿಗಳನ್ನು ನೋಡಿದ್ದೇನೆ, ಇನ್ನು ಕೆಲವು ಆಸ್ತಿಗಳನ್ನು ನೋಡಿಲ್ಲ. ಅ ಪರಿಶಿಷ್ಟದ ಆಸ್ತಿಗಳು ಭತ್ತ ಬೆಳೆಯುವ ಜಮೀನುಗಳು. ಸದರಿ ಸ್ವತ್ತುಗಳಲ್ಲಿ ಭತ್ತ ಬೆಳೆಯಲು ಎಷ್ಟು ಖರ್ಚಾಗುತ್ತದೆ ಮತ್ತು ಎಷ್ಟು ಉತ್ಪನ್ನ ಬರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಕರ್ಕಿಕೋಡಿಯ ಆಸ್ತಿಯ ಉತ್ಪನ್ನಗಳನ್ನು ನಮ್ಮ ತಂದೆಯವರು ತೆಗೆದುಕೊಂಡು ಹೋಗುತ್ತಿದ್ದರು ಎಂದು ತೋರಿಸಲು ನಾನು ಮೌಖಿಕವಾಗಿ ಹೇಳುವುದನ್ನು ಹೊರತುಪಡಿಸಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನಮ್ಮ ತಂದೆಯವರು ಕರ್ಕಿಕೋಡಿಯ ಆಸ್ತಿಯಲ್ಲಿ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಿಲ್ಲವಾದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನೌಕರಿ ಸೇರಲು ನಮ್ಮ ತಂದೆ-ತಾಯಿ ಆರ್ಥಿಕ ಸಹಾಯ ಮಾಡಿದ್ದರು. ಆರ್ಥಿಕ ಸಹಾಯ ತೋರಿಸಲು ನನ್ನ ಬಾಯಿ ಮಾತಿನ ಹೇಳಿಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ. 2000 ನೇ ಇಸವಿಯಿಂದ ನನಗೂ ಮತ್ತು ನನ್ನ ತಂದೆಗೂ ಸಂಬಂಧ ಸರಿ ಇರಲಿಲ್ಲ. ಸಹೋದರ ಮತ್ತು ಸಹೋದರಿಯರ ಕಂಟಾಕ್ಟ ಇರಲಿಲ್ಲ. ನಮ್ಮ ತಂದೆ-ತಾಯಿಯವರ ಜೊತೆಯಲ್ಲಿ ನಮ್ಮ ತಂಗಿ ಮಾತ್ರ ಇದ್ದರು. 3 ನೇ ಪ್ರತಿವಾದಿ ಹೊನ್ನಾವರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. 7 ಮತ್ತು 8 ನೇ ಪ್ರತಿವಾದಿಯರನ್ನು ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇಲ್ಲ. ನಮ್ಮ ತಂದೆಯವರು ಕ ಪರಿಶಿಷ್ಟದ ಆಸ್ತಿಗಳನ್ನು 7 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟವನ್ನು ಪ್ರಶ್ನಿಸಿ ನಮ್ಮ ತಂದೆ ಮತ್ತು ನನ್ನ ಸಹೋದರ, ಇತರರು ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಬ ಪರಿಶಿಷ್ಟದ 2 ಮತ್ತು 5 ನೇ ಸ್ವತ್ತನ್ನು ದಿನಾಂಕ 17-10-2022 ಹಾಗೂ 29-10-2022 ರಂದು 4 ನೇ ಪ್ರತಿವಾದಿಯು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಮಾರಾಟ ಆಗುವ ಕಾಲಕ್ಕೆ ಎಲ್ಲಾ ದಾಖಲಾತಿಗಳು 4 ನೇ ಪ್ರತಿವಾದಿಯರ ಹೆಸರಿನಲ್ಲಿ ಇತ್ತು ಎಂದರೆ ಅದು ಸರಿ. ಸದರಿ ಸ್ವತ್ತುಗಳನ್ನು ನಮ್ಮ ಅಜ್ಜನವರು ಆತನಿಗೆ ದಾನಪತ್ರ ಮತ್ತು ವಾಂಟಣಿಯ ಮೂಲಕ ನೀಡಿದ್ದ ಆಸ್ತಿಗಳಾಗಿದ್ದವು ಎಂದರೆ ಸರಿ. 4 ನೇ ಪ್ರತಿವಾದಿಯ ಹೆಸರಿಗೆ ಆದ ಮ್ಯುಟೇಶನ್‌ನ್ನು ನಾನಾಗಲೀ, ನನ್ನ ಸಹೋದರ ಸಹೋದರಿಯರಾಗಲೀ ಯಾರೂ ಪ್ರಶ್ನಿಸಿಲ್ಲ ಎಂದರೆ ನಮಗೆ ಆ ಬಗ್ಗೆ ಗೊತ್ತೇ ಇಲ್ಲ ಎನ್ನುತ್ತಾರೆ. ಸದರಿ ಮ್ಯುಟೇಶನ್ ಆಗುವ ಕಾಲಕ್ಕೆ ಯಾರೊಬ್ಬರೂ ತಕರಾರು ಹಾಕಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿಗಳನ್ನು 6 ನೇ ಪ್ರತಿವಾದಿ ರೂ.3,50,000-00 ಮತ್ತು ರೂ.4,50,000-00 ಹಣವನ್ನು ಕೊಟ್ಟು ಖರೀದಿ ಮಾಡಿರುವ ಸದ್ಭಾವನಾ ಖರೀದಿದಾರ ಎಂದರೆ ಅದು ನನಗೆ ಗೊತ್ತಿಲ್ಲ. ಒಂದೊಮ್ಮೆ ಸ್ವತ್ತುಗಳು ವಿಭಾಗವಾದರೆ 3 ಮತ್ತು 4 ನೇ ಪ್ರತಿವಾದಿಯರು ಮಾರಾಟ ಮಾಡಿರುವ ಸ್ವತ್ತಿಗಿಂತಲೂ ಹೆಚ್ಚು ಆಸ್ತಿ ಅವರಿಗೆ ಬರುತ್ತದೆ ಎಂದರೆ ಬಂದರೆ ಅವರು ತೆಗೆದುಕೊಳ್ಳಲಿ ಎನ್ನುತ್ತಾರೆ. ಮಾರಾಟ ಮಾಡಿರುವ ಆಸ್ತಿಯನ್ನು 3 ಮತ್ತು 4 ನೇ ಪ್ರತಿವಾದಿಯರ ಹಿಸ್ಸೆಗೆ ನೀಡಲು ನನಗೇನೂ ತೊಂದರೆ ಇಲ್ಲ. 3 ಮತ್ತು 4 ನೇ ಪ್ರತಿವಾದಿಯರ ಹಿಸ್ಸೆಯಲ್ಲಿ ಭಾಗ ಕೇಳಲು ನನಗೆ ಯಾವುದೇ ಹಕ್ಕು ಇಲ್ಲ, ನಾನು ಮಾರಾಟದ ಹಣದಲ್ಲಿ ಮಾತ್ರ ಹಿಸ್ಸೆ ಕೇಳಬಹುದು ಎಂದರೆ ನನಗೆ ಜಾಗವೇ ಬೇಕು ಎನ್ನುತ್ತಾರೆ. ದಾವಾ ಬ ಪರಿಶಿಷ್ಟದ 2 ಮತ್ತು 5 ನೇ ಸ್ವತ್ತುಗಳು ಎಲ್ಲಿವೆ ಎನ್ನುವುದನ್ನು ನಾನು ನೋಡಿದ್ದೇನೆ. ಸದರಿ ಸ್ಥಳಗಳಲ್ಲಿ ಈಗ ಕಂಪೌಂಡ್ ಹಾಕಿ ಕಟ್ಟಡ ಕಟ್ಟಲಾಗಿದೆ ಎಂದರೆ ಸರಿಯಲ್ಲ. ಈಗಲೂ ಖುಲ್ಲಾ ಇದೆ. ಸದರಿ ಸ್ವತ್ತುಗಳನ್ನು 6 ನೇ ಪ್ರತಿವಾದಿ ಹಣ ಖರ್ಚು ಮಾಡಿ ಅಭಿವೃದ್ಧಿಪಡಿಸಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿರುವ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಅವರಿಗೆ ತೊಂದರೆ ಕೊಡಲು ಅವರನ್ನು ಪಕ್ಷಗಾರರಾಗಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**